OS No.134/2020 PW-1

**<u>ದಿನಾಂಕ 21.01.2026 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಎಂ ಎಂ ವಕೀಲರಿಂದಃ</u>**

ಭಾಗ ಕೋರಿ ದಾವಾ ಹಾಕಿದ್ದೇನೆ. ಸೀನಪ್ಪನ ಆಸ್ತಿಯಲ್ಲಿ ಭಾಗ ಕೇಳಿದ್ದೇನೆ. ಈ ಬಗ್ಗೆ ದಾಖಲೆ ಇಲ್ಲ. ದಾವಾ ಸ್ವತ್ತುಗಳು ನಮ್ಮ ತಾತ ಚಲುವೆಗೌಡ ಹೆಸರಿನಲ್ಲಿ ಇದೆ. ಈ ಬಗ್ಗೆ ದಾಖಲೆ ಹಾಜರು ಮಾಡಿದ್ದೇನೆ. ಚಲುವೆಗೌಡ ರವರಿಗೆ 8 ಜನ ಮಕ್ಕಳು. ದಾವಾದಲ್ಲಿ ಚಲುವೆಗೌಡನ ಹೆಣ್ಣು ಮಕ್ಕಳನ್ನು ಸೇರಿಸಿಲ್ಲ. ಚಲುವೆಗೌಡನ ಮಗಳು ತಾಯವ್ವ ರವರಿಗೆ ಒಂದು ಗಂಡು ಮಗು ಇದೆ. ಅದೇ ರೀತಿ ಇನ್ನೊಬ್ಬ ಮಗಳು ಜಯಮ್ಮ ರವರಿಗೆ ಮಕ್ಕಳು ಇದ್ದಾರೆ. ಅದೇ ರೀತಿ ಇನ್ನೊಬ್ಬ ಮಗಳು ಸಾವಿತ್ರಮ್ಮ ರವರಿಗೆ ಮಕ್ಕಳು ಇದ್ದಾರೆ. ಅದೇ ರೀತಿ ಇನ್ನೊಬ್ಬ ಮಗಳು ಯೊಶೋದಮ್ಮ ರವರಿಗೆ ಮಕ್ಕಳು ಇದ್ದಾರೆ. ಇವರನ್ನು ದಾವದಲ್ಲಿ ಸೇರಿಸಲ್ಲ ಎಂದರೆ ನಿಜ.

ನನ್ನ ತಂದೆ ಸೀನಪ್ಪ. ನಾನು ಮದುವೆಯಾದ ನಂತರ ನನ್ನ ತಂದೆ ಸುಮಾರು 30 ವರ್ಷದ ಹಿಂದೆ ತೀರಿಕೊಂಡಿದ್ದಾರೆ. ನಾನು ಮದುವೆಯಾದಾಗ ನನಗೆ 15 ವರ್ಷ. ನನ್ನ ತಂದೆ 60 ವರ್ಷಗಳ ಹಿಂದೆ ಚಲುವೆಗೌಡ ಬುದುಕಿದ್ದಾಗ ಭಾಗ ಮಾಡಿಕೊಂಡು ಬೇರೆ ಇದ್ದರು ಎಂದರೆ ಸುಳ್ಳು. ನನ್ನ ತಂದೆಯ ಸಹೋದರರು ಬೇರೆ ಬೇರೆ ಇದ್ದರು ಎಂದರೆ ನಿಜ. ಹಣಕಾಸಿನ ವ್ಯವಹಾರ ಬೇರೆ ಬೇರೆ ಮಾಡುತ್ತಿದ್ದರು ಎಂದರೆ ಸಾಕ್ಷಿಯ ಜಮೀನು ಭಾಗ ಮಾಡಿಕೊಂಡಿಲ್ಲ ಎಂದು ಹೇಳುತ್ತಾರೆ. ದಿಃ 08.01.1975 ರಲ್ಲಿ ನನ್ನ ತಂದೆ ಸರ್ವೆ ನಂ.246/2 ವಿಸ್ತೀರ್ಣ 22 ಗುಂಟೆ ಹೊಂಗುನೂರಿನ ತಮ್ಮಯ್ಯನಿಗೆ ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ದಿನಾಂಕಃ 21.07.1984 ರಲ್ಲಿ ನನ್ನ ತಂದೆ ಸರ್ವೆ ನಂ.24 ವಿಸ್ತೀರ್ಣ 30 ಗುಂಟೆ ಹೊಂಗುನೂರಿನ ತಮ್ಮಯ್ಯನಿಗೆ ಮಾರಾಟ ಮಾಡಿದ್ದಾರೆ ಎಂದರೆ ಸುಳ್ಳು. ದಿನಾಂಕಃ 21.07.1984 ರಲ್ಲಿ ನನ್ನ ತಂದೆ ಸರ್ವೆ ನಂ.13 ವಿಸ್ತೀರ್ಣ 06 ಗುಂಟೆ ಪುಟ್ಟಸ್ವಾಮಿ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸುಳ್ಳು.

ನನ್ನ ತಂದೆ ಸರ್ವೆ ನಂ.74 ವಿಸ್ತೀರ್ಣ 7 $^{1/4}$ ಗುಂಟೆ ಸುಣ್ಣಘಟ್ಟದ

ಜವರಪ್ಪ ರವರಿಗೆ  ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ನನ್ನ ತಂದೆಗೆ ಮನೆ ಭಾಗ ಬಂದಿದೆ ಎಂದರೆ ಸುಳ್ಳು. ಸಾಕ್ಷಿಯು ಮುಂದುವರೆದು ನನ್ನ ತಂದೆ 70 ವರ್ಷಗಳ ಹಿಂದೆ ಖರೀದಿ ಮಾಡಿದ್ದಾರೆ ಎಂದು ಹೇಳುತ್ತಾರೆ.

ಮೇಲೆ ಹೇಳಿದ ಖರೀದಿ ಪತ್ರಗಳಲ್ಲಿ ನನ್ನ ತಂದೆ ಪಿತ್ರಾರ್ಜಿತವಾಗಿ ನನ್ನ ಹಿಸ್ಸೆಗೆ ಬಂದ ಆಸ್ತಿಗಳನ್ನು ಮಾರಾಟ ಮಾಡುತ್ತಿದ್ದೇನೆ ಎಂದು ತಿಳಿಸಿರುತ್ತಾರೆ ಎಂದರೆ ಸುಳ್ಳು. ನನ್ನ ತಂದೆ ವಿಭಾಗದಲ್ಲಿ ಪಡೆದುಕೊಂಡು ಎಲ್ಲಾ ಆಸ್ತಿಗಳನ್ನು ಮಾರಾಟ ಮಾಡಿದ್ದಾರೆ ಎಂದರೆ ಸುಳ್ಳು. ಮೇಲೆ ಹೇಳಿದ ಖರೀದಿ ಪತ್ರದ ಆಸ್ತಿಗಳನ್ನು ದಾವದಲ್ಲಿ ಸೇರಿಸಲ್ಲ ಎಂದರೆ ನಿಜ. ದಾವ ಆಸ್ತಿಗಳು ಪ್ರತಿವಾದಿಗಳಿಗೆ ಸೇರಿದ್ದು ಎಂದರೆ ನಿಜ. ದಾವಾ ಆಸ್ತಿಯು ಐಟಂ ನಂ.1 ಅನ್ನು 3ನೇ ಪ್ರತಿವಾದಿ ಖರೀದಿ ಮಾಡಿದ್ದಾನೆ ಎಂದರೆ ಸುಳ್ಳು. ದಾವಾ ಆಸ್ತಿಯು ಐಟಂ ನಂ.2 ಅನ್ನು 3ನೇ ಪ್ರತಿವಾದಿ ಖರೀದಿ ಮಾಡಿದ್ದಾನೆ ಎಂದರೆ ಸುಳ್ಳು. ದಾವಾ ಆಸ್ತಿಯು ಐಟಂ ನಂ.2 ರಲ್ಲಿ 34 ಗುಂಟೆ ಅನ್ನು 3ನೇ ಪ್ರತಿವಾದಿ ಖರೀದಿ ಮಾಡಿದ್ದಾನೆ ಎಂದರೆ ಸುಳ್ಳು. ದಾವಾ ಆಸ್ತಿಯು ಐಟಂ ನಂ.3 ಅನ್ನು 3 ರಿಂದ 6ನೇ ಪ್ರತಿವಾದಿರವರ ತಂದೆ ಖರೀದಿ ಮಾಡಿದ್ದಾನೆ ಎಂದರೆ ಸುಳ್ಳು. ದಾವಾ ಆಸ್ತಿಯು ಐಟಂ ನಂ.4 ಅನ್ನು 6ನೇ ಪ್ರತಿವಾದಿ ಖರೀದಿ ಮಾಡಿದ್ದಾನೆ ಎಂದರೆ ಸುಳ್ಳು. ದಾವಾ ಆಸ್ತಿಯು ಐಟಂ ನಂ.6 ಪಕ್ಷಗಾರರ ಕುಟುಂಬಕ್ಕೆ ಸೇರಿಲ್ಲ ಎಂದರೆ ಸುಳ್ಳು. ದಾವಾ ಆಸ್ತಿಯು ಐಟಂ ನಂ.7 ಅನ್ನು ಕೃಷ್ಣಮೂರ್ತಿ ರವರು ಖರೀದಿ ಮಾಡಿದ್ದಾನೆ ಎಂದರೆ ಸುಳ್ಳು. ದಾವಾ ಆಸ್ತಿಯು ಐಟಂ ನಂ.7 ಅನ್ನು 3 ರಿಂದ 6ನೇ ಪ್ರತಿವಾದಿರವರ ತಂದೆಗೆ ವಿಭಾಗದಲ್ಲಿ ಬಂದಿದ್ದೆ ಎಂದರೆ ಸುಳ್ಳು. ದಾವಾ ಆಸ್ತಿಯು ಐಟಂ ನಂ.9 ಅನ್ನು 9ನೇ ಪ್ರತಿವಾದಿಯ ಭಾಗಕ್ಕೆ ಬಂದಿದೆ ಎಂದರೆ ಸುಳ್ಳು. ನನ್ನ ತಂದೆಗೆ ಬಂದ ಹಿಸ್ಸಾ ಆಸ್ತಿಗಳನ್ನು ಮಾರಾಟ ಮಾಡಿ ನನ್ನ ತಂದೆಯ ಸಹೋದರರಿಗೆ ಬಂದ ಆಸ್ತಿಗಳನ್ನು ಸೇರಿಸಿ ಸುಳ್ಳು ದಾವಾ ಹಾಕಿದ್ದೇನೆ ಎಂದರೆ ಸುಳ್ಳು. ದಾವಾ ಆಸ್ತಿಗಳಲ್ಲಿ ನಮಗೆ ಯಾವುದೇ ಹಕ್ಕಿಲ್ಲ ಎಂದರೆ ಸುಳ್ಳು. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸುಳ್ಳು.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

(ವೆಂಕಟೇಶಪ್ಪ. ವಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.